# ಅಧ್ಯಾಯ–I

# ಪರಿಚಯ

# ಅಧ್ಯಾಯ-I

# ಪರಿಚಯ

## 1.1 ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಸ್ಥಾಪನೆ

ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿರುವ ಕಲ್ಯಾಣ ಕರ್ನಾಟಕ ಪ್ರದೇಶ (ಕೆಕೆ ಪ್ರದೇಶ) ಕರ್ನಾಟಕದ ಈಶಾನ್ಯ ಭಾಗದಲ್ಲಿ ಸ್ಥಿತವಾಗಿದ್ದು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದೊಂದಿಗೆ ಗಡಿಗಳನ್ನು ಹಂಚಿಕೊಳ್ಳುತ್ತದೆ. 2019 ರವರೆಗೆ ಹೈದರಾಬಾದ್ ಕರ್ನಾಟಕ ಪ್ರದೇಶ ಎಂದು ಕರೆಯಲ್ಪಡುತ್ತಿದ್ದ ಈ ಪ್ರದೇಶಗಳು ಹಿಂದಿನ ನಿಜಾಮ್ ರಾಜವಂಶದ ಭಾಗವಾಗಿದ್ದವು. ರಾಜ್ಯಗಳ ಮರುಸಂಘಟನೆಯ ನಂತರ ಈ ಪ್ರದೇಶಗಳನ್ನು ಕರ್ನಾಟಕ ರಾಜ್ಯದೊಂದಿಗೆ ವಿಲೀನಗೊಳಿಸಲಾಯಿತು (1956). ಕರ್ನಾಟಕದ ಇತರ ಭಾಗಗಳಿಗೆ ಹೋಲಿಸಿದರೆ, ವಿವಿಧ ಸಾಮಾಜಿಕ–ಆರ್ಥಿಕ ಸೂಚಕಗಳ ವಿಷಯದಲ್ಲಿ ಈ ಪ್ರದೇಶವು ತುಲನಾತ್ಮಕವಾಗಿ ಕಡಿಮೆ ಅಭಿವೃದ್ಧಿ ಹೊಂದಿದ ಪ್ರದೇಶವಾಗಿತ್ತು.

ಕಲ್ಯಾಣ ಕರ್ನಾಟಕ ಪ್ರದೇಶ ಮತ್ತು ರಾಜ್ಯದ ಉಳಿದ ಭಾಗಗಳ ನಡುವಿನ ಪ್ರಾದೇಶಿಕ ಅಸಮತೋಲನದ ಸಮಸ್ಯೆಯನ್ನು ಪರಿಹರಿಸಲು ರಾಜ್ಯ ಸರ್ಕಾರವು ಕಾಲಕಾಲಕ್ಕೆ ವಿಶೇಷ ಪ್ರಯತ್ನಗಳನ್ನು ಮಾಡಿದ್ದಿತು. 'ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಕಾಯ್ದೆ 1991' ಎಂಬ ಒಂದು ಪ್ರತ್ಯೇಕ ಶಾಸನವನ್ನು ಜಾರಿಗೊಳಿಸಲಾಯಿತು ಮತ್ತು ಇದು ಪ್ರದೇಶದ ಅಭಿವೃದ್ಧಿಯ ವೇಗವನ್ನು ತ್ವರಿತಗೊಳಿಸಲು ಮತ್ತು ರಾಜ್ಯದ ಇತರ ಭಾಗಗಳಿಗೆ ಸಮಾನವಾಗಿಸಲು ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಈ ಶಾಸನವು ಅವಕಾಶವನ್ನು ಒದಗಿಸಿತು.

ಈ ನಿಟ್ಟಿನಲ್ಲಿ ತನ್ನ ಪ್ರಯತ್ನಗಳ ಭಾಗವಾಗಿ, ಪ್ರಾದೇಶಿಕ ಅಸಮತೋಲನಗಳನ್ನು ಹೋಗಲಾಡಿಸಲು ಮತ್ತು ರಾಜ್ಯದಲ್ಲಿನ ಪ್ರಾದೇಶಿಕ ಅಸಮಾನತೆಗಳನ್ನು ಅಧ್ಯಯನ ಮಾಡಲು ರಾಜ್ಯ ಸರ್ಕಾರವು (ಏಪ್ರಿಲ್ 2000) ಉನ್ನತಾಧಿಕಾರ ಸಮಿತಿಯೊಂದನ್ನು ಸ್ಥಾಪಿಸಿತು, ಆ ಸಮಿತಿಯು ಡಾ.ಡಿ.ಎಂ.ನಂಜುಂಡಪ್ಪ ಸಮಿತಿ (ಡಾ.ನಂಜುಂಡಪ್ಪ ಸಮಿತಿ) ಎಂದು ಜನಪ್ರಿಯವಾಗಿತ್ತು. ಡಾ.ನಂಜುಂಡಪ್ಪ ಸಮಿತಿಯ ವರದಿಯು ರಾಜ್ಯದ ವಿವಿಧ ತಾಲ್ಲೂಕುಗಳು ಹಿಂದುಳಿದಿರುವುದನ್ನು ಎತ್ತಿ ತೋರಿಸಿತು. 2001ರಲ್ಲಿದ್ದ ರಾಜ್ಯದ ಒಟ್ಟು 175 ತಾಲೂಕುಗಳ ಪೈಕಿ 35 ತಾಲೂಕುಗಳನ್ನು ಹಿಂದುಳಿದ, 40 ತಾಲೂಕುಗಳನ್ನು ಹೆಚ್ಚು ಹಿಂದುಳಿದ ಮತ್ತು 39 ತಾಲೂಕುಗಳನ್ನು ಅತ್ಯಂತ ಹಿಂದುಳಿದ ತಾಲೂಕುಗಳೆಂದು ವರದಿಯು ಗುರುತಿಸಿತ್ತು. ರಾಜ್ಯದಲ್ಲಿನ 39 ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ 21 ತಾಲ್ಲೂಕುಗಳು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿದ್ದವು. ಡಾ.ನಂಜುಂಡಪ್ಪ ಸಮಿತಿಯ ವರದಿಯ ಅನುಸರಣೆಯ ಭಾಗವಾಗಿ ಈ ತಾಲ್ಲೂಕುಗಳ ಹಿಂದುಳಿದಿರುವಿಕೆಯನ್ನು ನಿವಾರಿಸಲು ರಾಜ್ಯ ಸರ್ಕಾರವು ವಿಶೇಷ ಅಭಿವೃದ್ಧಿ ಯೋಜನೆಯನ್ನು (ಎಸ್‌ಡಿಪಿ) ಪ್ರಾರಂಭಿಸಿತು.

ಈ ಉಪಕ್ರಮಗಳ ಹೊರತಾಗಿಯೂ, ಕಲ್ಯಾಣ ಕರ್ನಾಟಕ ಪ್ರದೇಶವು ಹಿಂದುಳಿದಿರುವ ಪ್ರದೇಶವಾಗಿಯೇ ಉಳಿದಿದೆ. ಭಾರೀ ಬೇಡಿಕೆಯನ್ನು ಪರಿಗಣಿಸಿ, ರಾಜ್ಯ ವಿಧಾನಸಭೆಯು ಭಾರತದ ಸಂವಿಧಾನದ 371ನೇ ವಿಧಿಯಡಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನವನ್ನು ನೀಡುವ ನಿರ್ಣಯವನ್ನು ಅಂಗೀಕರಿಸಿತು (2010). ಜನವರಿ 2013ರಲ್ಲಿ, 98ನೇ ಸಂವಿಧಾನ ತಿದ್ದುಪಡಿ ಕಾಯ್ದೆಯ ಮೂಲಕ 371–ಜೆ ವಿಧಿಯನ್ನು ಸೇರಿಸಲಾಯಿತು. 371–ಜೆ ವಿಧಿಯ ಸಂಪೂರ್ಣ ಪಠ್ಯವು ಈ ಕೆಳಗಿನಂತಿದೆ:

**ಕೋಷ್ಟಕ–1.1: .ಭಾರತ ಸಂವಿಧಾನದ 371–ಜೆ ವಿಧಿ**

(1) ರಾಷ್ಟ್ರಪತಿಗಳು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಮಾಡಿದ ಆದೇಶದ ಮೂಲಕ ರಾಜ್ಯಪಾಲರಿಗೆ ಈ ಕೆಳಗಿನ ಯಾವುದೇ ವಿಶೇಷ ಜವಾಬ್ದಾರಿಯನ್ನು ನೀಡಬಹುದು:

(ಎ) ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೆ ಪ್ರತ್ಯೇಕ ಅಭಿವೃದ್ಧಿ ಮಂಡಳಿಯ ಸ್ಥಾಪನೆ, ಮಂಡಳಿಯ ಕಾರ್ಯನಿರ್ವಹಣೆಯ ವರದಿಯನ್ನು ಪ್ರತಿ ವರ್ಷ ರಾಜ್ಯ ವಿಧಾನಸಭೆಯ ಮುಂದೆ ಮಂಡಿಸಬೇಕು;

(ಬಿ) ಒಟ್ಟಾರೆಯಾಗಿ ರಾಜ್ಯದ ಅವಶ್ಯಕತೆಗಳಿಗೆ ಒಳಪಟ್ಟು ಮೇಲೆ ಹೇಳಲಾದ ಪ್ರದೇಶದ ಅಭಿವೃದ್ಧಿ ವೆಚ್ಚಕ್ಕಾಗಿ ನಿಧಿಯ ಸಮಾನ ಹಂಚಿಕೆ; ಮತ್ತು

(ಸಿ) ಒಟ್ಟಾರೆಯಾಗಿ ರಾಜ್ಯದ ಅವಶ್ಯಕತೆಗಳಿಗೆ ಒಳಪಟ್ಟು ಸಾರ್ವಜನಿಕ ಉದ್ಯೋಗ, ಶಿಕ್ಷಣ ಮತ್ತು ವೃತ್ತಿಪರ ತರಬೇತಿಯ ವಿಷಯಗಳಲ್ಲಿ ಮೇಲೆ ಹೇಳಲಾದ ಪ್ರದೇಶಕ್ಕೆ ಸೇರಿದ ಜನರಿಗೆ ಸಮಾನ ಅವಕಾಶಗಳು ಮತ್ತು ಸೌಲಭ್ಯಗಳು

(2) ಉಪ–ಕಲಂ (ಸಿ) ಮತ್ತು (1)ರ ಅಡಿಯಲ್ಲಿ ಮಾಡಿದ ಆದೇಶವು ಈ ಕೆಳಗಿನವುಗಳನ್ನು ಒದಗಿಸಬಹುದು

(ಎ) ಹೈದರಾಬಾದ್–ಕರ್ನಾಟಕ ಪ್ರದೇಶದ ಶೈಕ್ಷಣಿಕ ಮತ್ತು ವೃತ್ತಿಪರ ತರಬೇತಿ ಸಂಸ್ಥೆಗಳಲ್ಲಿ ಹುಟ್ಟಿನಿಂದ ಅಥವಾ ವಾಸದಿಂದ ಆ ಪ್ರದೇಶಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಅನುಪಾತದ ಸೀಟುಗಳ ಮೀಸಲಾತಿ; ಮತ್ತು


(ಬಿ) ಹೈದರಾಬಾದ್–ಕರ್ನಾಟಕ ಪ್ರದೇಶದಲ್ಲಿ ರಾಜ್ಯ ಸರ್ಕಾರದ ಅಡಿಯಲ್ಲಿ ಮತ್ತು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಸಂಸ್ಥೆ ಅಥವಾ ಮಂಡಳಿಗಳಲ್ಲಿ ಹುದ್ದೆಗಳು ಅಥವಾ ಹುದ್ದೆಗಳ ವರ್ಗಗಳನ್ನು ಗುರುತಿಸುವುದು ಮತ್ತು ಹುಟ್ಟಿನಿಂದ ಅಥವಾ ವಾಸದಿಂದ ಆ ಪ್ರದೇಶಕ್ಕೆ ಸೇರಿದ ವ್ಯಕ್ತಿಗಳಿಗೆ ಅಂತಹ ಹುದ್ದೆಗಳ ಅನುಪಾತದ ಮೀಸಲಾತಿ ಮತ್ತು ನೇರ ನೇಮಕಾತಿ ಅಥವಾ ಬಡ್ತಿಯ ಮೂಲಕ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ವಿಧಾನದಲ್ಲಿ ನೇಮಕಾತಿ ಮಾಡುವುದು.

ಪ್ರಾದೇಶಿಕ ಅಸಮಾನತೆಗಳನ್ನು ಪರಿಹರಿಸಲು ಪ್ರದೇಶ ಅಭಿವೃದ್ಧಿ ಮಂಡಳಿಯ ಸ್ಥಾಪನೆ ಸೇರಿದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ರಾಜ್ಯದ ರಾಜ್ಯಪಾಲರಿಗೆ ಅಧಿಕಾರ ನೀಡಲು ಈ ವಿಧಿಯು ಭಾರತದ ರಾಷ್ಟ್ರಪತಿಗಳಿಗೆ ಅಧಿಕಾರ ನೀಡಿದೆ. ಅದರಂತೆ, ರಾಜ್ಯಪಾಲರು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಹೆಚ್‌ಕೆಆರ್‌ಡಿಬಿ) ಸ್ಥಾಪಿಸುವ ಆದೇಶವನ್ನು ಹೊರಡಿಸಿದರು (ನವೆಂಬರ್ 2013). ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಕಾಯಿದೆ 1991 ಅನ್ನು ಫೆಬ್ರವರಿ 2014ರಲ್ಲಿ ರದ್ದುಗೊಳಿಸಲಾಯಿತು ಮತ್ತು ಹಿಂದಿನ ಮಂಡಳಿಯ ಸಿಬ್ಬಂದಿ ಮತ್ತು ಇತರ ಆಸ್ತಿಗಳನ್ನು ಹೊಸದಾಗಿ ರಚಿಸಲಾದ ಹೆಚ್‌ಕೆಆರ್‌ಡಿಬಿಗೆ ವರ್ಗಾಯಿಸಲಾಯಿತು. ಹೆಚ್‌ಕೆಆರ್‌ಡಿಬಿಯನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಎಂದು ಮರುನಾಮಕರಣ ಮಾಡಲಾಯಿತು (ಸೆಪ್ಟೆಂಬರ್ 2019).

## 1.2 ಮಂಡಳಿಯ ಅಧಿಕಾರ ವ್ಯಾಪ್ತಿ

ಕಲಬುರಗಿ, ಬೀದರ್, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿರುವ ಸಂಪೂರ್ಣ ಕಲ್ಯಾಣ ಕರ್ನಾಟಕ ಪ್ರದೇಶದ ಮೇಲೆ ಮಂಡಳಿಯು ಅಧಿಕಾರವನ್ನು ಹೊಂದಿದೆ. ಕಲ್ಯಾಣ ಕರ್ನಾಟಕ ಪ್ರದೇಶದ ಭೌಗೋಳಿಕ ನೆಲೆಯನ್ನು **ನಕ್ಷೆ–1.1**ರಲ್ಲಿ ತೋರಿಸಲಾಗಿದೆ.

**ನಕ್ಷೆ–1.1: ಕಲ್ಯಾಣ ಕರ್ನಾಟಕ ಪ್ರದೇಶದಡಿಯಲ್ಲಿ ವ್ಯಾಪಿಸಿರುವ ಜಿಲ್ಲೆಗಳು**




ಆಧಾರ: ಕರ್ನಾಟಕ ಸರ್ಕಾರದ ಮತ್ತು ಕೆಕೆಆರ್‌ಡಿ ಮಂಡಳಿಯ ಜಾಲತಾಣದಿಂದ ಅಳವಡಿಸಿಕೊಳ್ಳಲಾಗಿದೆ

## 1.3 ಮಂಡಳಿಯ ಸಂಘಟನಾ ರಚನೆ

ಕೆಕೆಆರ್‌ಡಿಬಿಗೆ ಓರ್ವ ಅಧ್ಯಕ್ಷರ ನೇತೃತ್ವವಿರುತ್ತದೆ ಮತ್ತು ಅದರ ಮಂಡಳಿಯಲ್ಲಿ 28[1] ಸದಸ್ಯರಿರುತ್ತಾರೆ. ಕಾರ್ಯದರ್ಶಿ, ಕೆಕೆಆರ್‌ಡಿಬಿ ಮಂಡಳಿಯ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಾರೆ. ಪ್ರದೇಶದ ಸರ್ಕಾರೀ ಇಲಾಖೆಗಳು/ಏಜೆನ್ಸಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಮೂಲಕ ಯೋಜಿತ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಮಂಡಳಿಯು ಜವಾಬ್ದಾರವಾಗಿದೆ. ಎಲ್ಲಾ ಮೇಲ್ಸ್ತರದ ಯೋಜನೆಗಳ ಅನುಷ್ಠಾನಕ್ಕೆ ಮಂಡಳಿಯ ಸದಸ್ಯ ಕಾರ್ಯದರ್ಶಿಯವರು ಪ್ರಮುಖವಾಗಿ ಜವಾಬ್ದಾರರಾಗಿದ್ದರೆ, ಜಿಲ್ಲಾಧಿಕಾರಿಗಳು (ಡಿಸಿ)/ಸಂಬಂಧಿತ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು (ಸಿಇಒ) ಕೆಳಸ್ತರದ ಯೋಜನೆಗಳಿಗೆ ನೋಡಲ್ ಅನುಷ್ಠಾನ ಅಧಿಕಾರಿಗಳಾಗಿರುತ್ತಾರೆ.

ಕರ್ನಾಟಕ ಸರ್ಕಾರದ (ವಹಿವಾಟು ಹಂಚಿಕೆ) ನಿಯಮಗಳು, 1977ಕ್ಕೆ ಸೇರಿಸಲಾದ (ಮೇ 2015) ತಿದ್ದುಪಡಿಯ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಆದೇಶ 2013 ರಲ್ಲಿ ಒಳಗೊಂಡಿರುವ ವಿವಿಧ ನಿಬಂಧನೆಗಳ ಪ್ರಕಾರ ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ

[1] ಲೋಕಸಭೆ ಮತ್ತು ರಾಜ್ಯಸಭಾ ಸದಸ್ಯರು, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರು, ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಮಂಡಳಿಯಡಿಯಲ್ಲಿನ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಇವರುಗಳನ್ನು ಒಳಗೊಂಡಿರುತ್ತದೆ.

ಮೇಲ್ವಿಚಾರಣೆ ಮತ್ತು ಅಂಕಿಅಂಶ ಇಲಾಖೆಯು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ನೀಡಲಾಗಿದೆ.

## 1.4 ಲೆಕ್ಕಪರಿಶೋಧನಾ ಚೌಕಟ್ಟು

### *1.4.1 ಲೆಕ್ಕಪರಿಶೋಧನಾ ಉದ್ದೇಶಗಳು*

ಈ ಕೆಳಗಿನ ಕ್ಷೇತ್ರಗಳಲ್ಲಿ ಮಂಡಳಿಯ ಕಾರ್ಯನಿರ್ವಹಣೆಯ ಪರಿಣಾಮಕಾರಿತ್ವವನ್ನು ನಿರ್ಣಯಿಸಲು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು:

- ಪ್ರಾದೇಶಿಕ ಅಸಮತೋಲನವನ್ನು ಪರಿಹರಿಸಲು ವಿವಿಧ ಹಂತಗಳಲ್ಲಿ ಯೋಜನೆ;
- ಪ್ರದೇಶದ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ವೃದ್ಧಿಗೊಳಿಸಲು ಯೋಜಿತ ಮಧ್ಯಸ್ಥಿಕೆಗಳನ್ನು ಅನುಷ್ಠಾನಗೊಳಿಸುವುದು;
- ಅಭಿವೃದ್ಧಿಗಾಗಿ ನಿಧಿಯ ಸಮಾನ ಹಂಚಿಕೆಯನ್ನು ಮತ್ತು ಅದರ ಪರಿಣಾಮಕಾರಿ ಬಳಕೆಯನ್ನು; ಖಚಿತಪಡಿಸಿಕೊಳ್ಳುವುದು
- ಅಂತರ್ಗತ ಬೆಳವಣಿಗೆಯನ್ನು ಸುಗಮಗೊಳಿಸುವುದು ಮತ್ತು ಸಾರ್ವಜನಿಕ ಉದ್ಯೋಗ, ಶಿಕ್ಷಣ ಮತ್ತು ವೃತ್ತಿಪರ ತರಬೇತಿಯಲ್ಲಿ ಪ್ರದೇಶದ ನಿವಾಸಗಳಿಗೆ ಅವಕಾಶಗಳು ಮತ್ತು ಸೌಲಭ್ಯಗಳನ್ನು ಒದಗಿಸುವುದು.

### *1.4.2 ಲೆಕ್ಕಪರಿಶೋಧನಾ ಮಾನದಂಡ*

ಲೆಕ್ಕಪರಿಶೋಧನಾ ಮಾನದಂಡಗಳನ್ನು ಈ ಕೆಳಗಿನವುಗಳಿಂದ ಪಡೆಯಲಾಯಿತು:

- ಸಂವಿಧಾನ (ತೊಂಬತ್ತೆಂಟನೇ ತಿದ್ದುಪಡಿ) ಕಾಯಿದೆ, 2012;
- ಕೆಕೆಆರ್‌ಡಿಬಿ ಆದೇಶ, 2013;
- ಡಾ.ನಂಜುಂಡಪ್ಪ ಸಮಿತಿ ವರದಿ;
- ಸಾರ್ವಜನಿಕ ಖರೀದಿಯಲ್ಲಿ ಕರ್ನಾಟಕ ಪಾರದರ್ಶಕತೆ (ಕೆಟಿಪಿಪಿ) ಕಾಯಿದೆ ಮತ್ತು ನಿಯಮಗಳು;
- ಕರ್ನಾಟಕ ಲೋಕೋಪಯೋಗಿ ಲೆಕ್ಕಸಂಹಿತೆ;
- ಪರಿಶಿಷ್ಟ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯಿದೆ, 2013;
- ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಸರ್ಕಾರಿ ಆದೇಶಗಳು, ಸುತ್ತೋಲೆಗಳು, ಮಾರ್ಗಸೂಚಿಗಳು.

### *1.4.3 ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ವಿಧಾನ*

2016–17ರಿಂದ 2020–21ರ ಅವಧಿಗೆ ಮಂಡಳಿಯ ಚಟುವಟಿಕೆಗಳನ್ನು ಒಳಗೊಂಡಿರುವ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ಜುಲೈ 2021ರಿಂದ ಡಿಸೆಂಬರ್ 2021ರ ಅವಧಿಯಲ್ಲಿ ಯೋಜನೆ, ಕಾರ್ಯಕ್ರಮ ಮೇಲ್ವಿಚಾರಣೆ ಮತ್ತು ಅಂಕಿಅಂಶಗಳ ಇಲಾಖೆ ಹಾಗೂ ಕಲಬುರಗಿಯಲ್ಲಿರುವ ಮಂಡಳಿಯ ಪ್ರಧಾನ ಕಚೇರಿಯಲ್ಲಿನ ದಾಖಲೆಗಳ ಪರೀಕ್ಷಾ–ಪರಿಶೀಲನೆಯ ಮೂಲಕ ನಡೆಸಲಾಯಿತು.

ಮಂಡಳಿಯು ಪ್ರಾರಂಭಿಸಿದ 24,307 ಕಾಮಗಾರಿಗಳಲ್ಲಿ ಒಟ್ಟು 601 ಕಾಮಗಾರಿಗಳನ್ನು ಲೆಕ್ಕಪರಿಶೋಧನೆಯು ಶ್ರೇಣೀಕರಣಕ್ಕೆ ವಿತ್ತೀಯ ಮೌಲ್ಯವನ್ನು ಆಧಾರವಾಗಿ ಶ್ರೇಣೀಕೃತ ಮಾದರಿ ವಿಧಾನವನ್ನು ಅಳವಡಿಸಿಕೊಂಡು ವಿವರವಾದ ಪರಿಶೀಲನೆಗಾಗಿ ಆಯ್ಕೆ ಮಾಡಿಕೊಂಡಿತು,. ಅಗತ್ಯವಿರುವ ಕಡೆಗಳಲ್ಲಿ ಕಾಮಗಾರಿಗಳ/ಸ್ಥಳಗಳ ಜಂಟಿ ಭೌತಿಕ ಪರಿಶೀಲನೆಯನ್ನೂ ಸಹ ನಡೆಸಲಾಯಿತು. ರಾತ್ರಿ ಬೆಳಕಿನ ದತ್ತಾಂಶದ ಅಧ್ಯಯನವನ್ನು ಕೈಗೊಳ್ಳಲು ಪ್ರಾದೇಶಿಕ ದೂರ ಸಂವೇದಿ ಕೇಂದ್ರ (ಆರ್‌ಆರ್‌ಎಸ್‌ಸಿ), ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, (ಐಎಸ್‌ಆರ್‌ಒ) ಬೆಂಗಳೂರು, ಇವರ ಬೆಂಬಲವನ್ನೂ

ಸಹ ಲೆಕ್ಕಪರಿಶೋಧನೆಯು ಕೋರಿತು. ಆರ್‌ಆರ್‌ಎಸ್‌ಸಿ, ಐಎಸ್‌ಆರ್‌ಒನ ಅಧ್ಯಯನ ವರದಿಯ ಫಲಿತಾಂಶಗಳನ್ನು ಲೆಕ್ಕಪರಿಶೋಧನಾ ವರದಿಯಲ್ಲಿ ಸೂಕ್ತ ಸ್ಥಳಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಯೋಜನೆ, ಕಾರ್ಯಕ್ರಮ ಮೇಲ್ವಿಚಾರಣೆ ಮತ್ತು ಅಂಕಿಅಂಶಗಳ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರೊಂದಿಗೆ 6 ಸೆಪ್ಟೆಂಬರ್ 2021ರಂದು ಪ್ರವೇಶಸಭೆಯನ್ನು ನಡೆಸಲಾಯಿತು, ಇದರಲ್ಲಿ ಲೆಕ್ಕಪರಿಶೋಧನಾ ಉದ್ದೇಶಗಳು, ವ್ಯಾಪ್ತಿ ಮತ್ತು ಲೆಕ್ಕಪರಿಶೋಧನೆಯ ವಿಧಾನವನ್ನು ಚರ್ಚಿಸಲಾಯಿತು. ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಕರಡು ಲೆಕ್ಕಪರಿಶೋಧನಾ ವರದಿಯ ರೂಪದಲ್ಲಿ ಸರ್ಕಾರಕ್ಕೆ ಮತ್ತು ಮಂಡಳಿಗೆ ತಿಳಿಸಲಾಯಿತು. ಕರಡು ಲೆಕ್ಕಪರಿಶೋಧನಾ ವರದಿಗೆ ಮಂಡಳಿಯು ಉತ್ತರಗಳನ್ನು ಸಲ್ಲಿಸಿತು ಮತ್ತು ರಾಜ್ಯ ಸರ್ಕಾರವು ದೃಢೀಕರಿಸಿತು. ಲೆಕ್ಕಪರಿಶೋಧನಾ ಫಲಿತಾಂಶಗಳನ್ನು ಚರ್ಚಿಸಲು ಸರ್ಕಾರ ಮತ್ತು ಮಂಡಳಿಯ ಪ್ರತಿನಿಧಿಗಳೊಂದಿಗೆ 22 ಜೂನ್ 2022 ರಂದು ನಿರ್ಗಮನ ಸಭೆಯನ್ನೂ ಸಹ ನಡೆಸಲಾಯಿತು. ಕರಡು ಲೆಕ್ಕಪರಿಶೋಧನಾ ವರದಿಗೆ ಮಂಡಳಿ ಮತ್ತು ಸರ್ಕಾರದ ಪ್ರತಿಕ್ರಿಯೆ ಹಾಗೂ ನಿರ್ಗಮನ ಸಭೆಯಲ್ಲಿ ಅವರ ಅಭಿಪ್ರಾಯಗಳನ್ನು ಈ ವರದಿಯಲ್ಲಿ ಪರಿಗಣಿಸಲಾಗಿದೆ.

## 1.5 ಕೃತಜ್ಞತೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯನ್ನು ನಡೆಸುವಲ್ಲಿ ಯೋಜನೆ, ಕಾರ್ಯಕ್ರಮ ಮೇಲ್ವಿಚಾರಣೆ ಮತ್ತು ಅಂಕಿಅಂಶಗಳ ಇಲಾಖೆ, ಕಲ್ಯಾಣ ಕರ್ನಾಟಕ ಮಂಡಳಿ, ಜಿಲ್ಲಾಧಿಕಾರಿಗಳ ಕಚೇರಿಗಳು ಮತ್ತು ಇತರ ಎಲ್ಲಾ ಅನುಷ್ಠಾನ ಸಂಸ್ಥೆಗಳು ನೀಡಿದ ಸಹಕಾರ ಮತ್ತು ಸಹಾಯವನ್ನು ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ. ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಯನ್ನು ತಿಳಿಯಲು ರಾತ್ರಿವೇಳೆ ಪ್ರಕಾಶಮಾನ ದತ್ತಾಂಶದ ಅಧ್ಯಯನವನ್ನು ಕೈಗೊಳ್ಳುವ ಮೂಲಕ ಪ್ರಾದೇಶಿಕ ದೂರಸಂವೇದಿ ಕೇಂದ್ರ, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ, ಬೆಂಗಳೂರು ಒದಗಿಸಿದ ಬೆಂಬಲವನ್ನೂ ಸಹ ಲೆಕ್ಕಪರಿಶೋಧನೆಯು ಸ್ಮರಿಸುತ್ತದೆ.

## 1.6 ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳ ಜೋಡಣೆ

ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯಲ್ಲಿ ಕಂಡಬಂದ ಅಂಶಗಳನ್ನು ಕೆಳಗಿನ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ:

ಅಧ್ಯಾಯ–2: ಪ್ರಮುಖ ಕಾರ್ಯಕ್ಷಮತಾ ಸೂಚಕಗಳಿಗೆ ಸಂಬಂಧಿಸಿದಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಯ ಸ್ಥಿತಿ

ಅಧ್ಯಾಯ–3: ಮಂಡಳಿಯ ಕಾರ್ಯನಿರ್ವಹಣೆ

ಅಧ್ಯಾಯ–4: ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ

ಅಧ್ಯಾಯ–5: ಹಣಕಾಸು ನಿರ್ವಹಣೆ

ಅಧ್ಯಾಯ–6: ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ